■ ತೆಲುಗು ಮೂಲ: ಬಿ.ಪಿ. ಕರುಣಾಕರ

ಕನ್ನಡಕ್ಕೆ: ಡಿ.ಎನ್. ಶ್ರೀನಾಥ್

ನನ್ನ ನಲ್ವತ್ತನೇ ವಯಸ್ಸಿಗೆ ಹೆಂಡತಿ ಇಹಲೋಕ ತ್ಯಜಿಸಿದಳು. ಆಗ ನನ್ನ ಹಿರಿಯ ಮಗಳು ಇಂಟರ್ ನಲ್ಲಿ ಮತ್ತು ಕಿರಿಯ ಮಗಳು ಹತ್ತನೇ ತರಗತಿಯಲ್ಲಿ ಓದುತ್ತಿದ್ದರು. ಎರಡನೇ ಮದುವೆಯಾಗುವಂತೆ ನನ್ನ ಬಂಧು–ಬಾಂಧವರು ಮತ್ತು ಮಿತ್ರರು ನನಗೆ ಸಲಹೆಯಿತ್ತರು. ಆದರೆ ನನಗೆ ಮದುವೆಯಾಗುವ ಮನಸ್ಸಿರಲಿಲ್ಲ.

ಇಬ್ಬರು ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ, ಒಳ್ಳೆಯ ಸಂಬಂಧ ನೋಡಿ ಅವರಿಗೆ ಮದುವೆ ಮಾಡಿದ ನಂತರ ನಾನು ನನ್ನೆಲ್ಲಾ ಜವಾಬ್ದಾರಿಗಳಿಂದ ಮುಕ್ತನಾದೆ. ಈಗ ನಾನು ಐವತ್ತೈದನೇ ವಯಸ್ಸಿಗೆ ಕಾಲಿಟ್ಟಿದ್ದೆ; ನಿವೃತ್ತಿ ಹೊಂದಲು ಐದು ವರ್ಷಗಳಿದ್ದವು. ಮಕ್ಕಳು ತಮ್ಮ ತಮ್ಮ ಗೃಹಸ್ಥ ಜೀವನವನ್ನು ಪ್ರವೇಶಿಸಿದಾಗ ನನಗೆ ಒಂಟಿತನ ಕಾಡಲಾರಂಭಿಸಿತು. ಕಚೇರಿಯಲ್ಲಿ ಹೇಗೋ ಕಾಲ ಕಳೆದು ಹೋಗುತ್ತಿತ್ತು. ಆದರೆ ಮನೆಗೆ ಬಂದಾಗ ಏನು ಮಾಡಬೇಕೆಂದೇ ತೋಚುತ್ತಿರಲಿಲ್ಲ. ಹೇಳುವವರು ಕೇಳುವವರು ಇಲ್ಲದಿದ್ದರಿಂದಾಗಿ ಕಾಲ ಕಳೆಯುವುದು ಕಷ್ಟವೆನಿಸುತ್ತಿತ್ತು. ಅಡುಗೆ ಮಾಡಿಕೊಳ್ಳಬೇಕೆನಿಸಿದಾಗ ಮನೆಯಲ್ಲಿಯೇ ಅಡುಗೆ ಮಾಡಿಕೊಳ್ಳುತ್ತಿದ್ದೆ, ಬೇಡವೆನಿಸಿದಾಗ ಹೋಟೆಲ್‌ಗೆ ಹೋಗುತ್ತಿದ್ದೆ. ಒಂಟಿ ಜೀವನ ಸಾಕಾಗಿ ಹೋಗಿತ್ತು.

ಈ ನಡುವೆ ಸದಾನಂದ ನನ್ನ ಬಳಿಗೆ ಬಂದು ಹೇಳಿದ, 'ನೋಡಪ್ಪಾ, ಇನ್ನೂ ಕಾಲ ಮೀರಿಲ್ಲ. ನಾನು ಇದೇ ಕೈಗಳಿಂದ ನಿನಗಿಂತ ವಯಸ್ಸಾದವರಿಗೆ ಮದುವೆ ಮಾಡಿಸಿದ್ದೇನೆ. ಈಗ ಹಿಂದು ಮುಂದು ನೋಡಬೇಡ. ನಿನಗೊಬ್ಬಳು ಸಂಗಾತಿ ಬೇಕು. ಇಲ್ಲದಿದ್ದಲ್ಲಿ, ಮುಂದೆ ಇನ್ನೂ ಕಷ್ಟ ಅನುಭವಿಸ ಬೇಕಾಗುತ್ತದೆ. ವಾರಂಗಲ್‌ನಲ್ಲಿ ನನಗೆ ಪರಿಚಯವಿರುವ ಸರಸ್ವತಿ ಎನ್ನುವವರಿದ್ದಾರೆ. ಅವರು ಬಿ.ಎಡ್ ಮಾಡಿ ಒಂದು ಖಾಸಗಿ ಶಾಲೆಯಲ್ಲಿ ಅಧ್ಯಾಪಕರಾಗಿದ್ದಾರೆ. ಅವರಿಗೆ ಈಗ ನಲವತ್ತೈದು ವರ್ಷವಿರಬೇಕು. ಗಂಡ ವಿಚ್ಛೇದನ ಕೊಟ್ಟಿದ್ದಾನೆ. ನೋಡಲು ಚೆನ್ನಾಗಿದ್ದಾರೆ. ನಿನ್ನ ವಿಷಯದಲ್ಲಿ ಮಾತನಾಡಲೇ?'

'ಅವಳಿಗೆ ಮಕ್ಕಳಿದ್ದಾರೆಯೇ?' ನಾನು ವಿಚಾರಿಸಿದೆ.

'ಒಬ್ಬ ಹುಡುಗ ಇದ್ದಾನೆ, ಇಂಟರ್ ಮುಗಿಸಿ ಡಿಗ್ರಿಗೆ ಸೇರಿದ್ದಾನೆ.'

ನಾನು ಯಾವ ಮೂಡಿನಲ್ಲಿದ್ದೆನೋ ಹೇಳಿದೆ, 'ವಿಷಯ ಪ್ರಸ್ತಾಪಿಸು'

ಇದು ನಾನು ಮಾಡಿದ ತಪ್ಪಾಗಿತ್ತು.

'ಸರಸ್ವತಿಯ ಫೋನ್ ನಂಬರ್ ನನಗೆ ಗೊತ್ತಿಲ್ಲ. ನಾನು ವಾರಂಗಲ್‌ಗೆ ಹೋದಾಗ ಅವರ ಹತ್ರ ಮಾತಾಡ್ತೀನಿ. ಅವರಿಗೆ ಇಷ್ಟವಾದರೆ, ಅವರಿಗೆ ನಿನ್ನ ನಂಬರ್ ಕೊಡ್ತೀನಿ, ಆಯ್ತಾ?'

'ನನಗೂ ಅವಳಿಗೂ ಹತ್ತು ವರ್ಷ ಡಿಫರೆನ್ಸ್ ಇದೆಯಲ್ಲ!' ಎಂದೆ.

'ನಿನ್ನ ವಯಸ್ಸಿನ ಬಗ್ಗೆ ಮತ್ತು ಇನ್ನಿತರ ವಿಷಯಗಳ ಬಗ್ಗೆ ಅವರಿಗೆ ಹೇಳ್ತೀನಿ. ಒಂದು ವೇಳೆ ಅವರು ತಮ್ಮ ಫೋನ್ ನಂಬರ್ ಕೊಟ್ಟರೆ ಅವರಿಗೆ ಅಡ್ಡಿ ಇಲ್ಲ ಅಂತ ತಿಳಿ. ಈ ವಯಸ್ಸಿನಲ್ಲೂ ನೀನು ಚೆನ್ನಾಗಿ ಕಾಣಿಸ್ತೀಯ. ನೋಡ್ತಿರು, ಅವರು ಬೇಡ ಅನ್ನಲ್ಲ. ಇಂಥ ವಿಷಯದಲ್ಲಿ ಮಧ್ಯವರ್ತಿಗಳ ಬದಲು ನೀನೇ ಮಾತನಾಡೋದು ಒಳ್ಳೇದು' ಎಂದು ಸದಾನಂದ ನನ್ನನ್ನು ಹುರಿದುಂಬಿಸಿದ.

ನಾನು ತಲೆಯಾಡಿಸಿದೆ. ಗೊತ್ತಿದ್ದೂ ನಾನು ಸದಾನಂದನ ಬಲೆಗೆ ಬೀಳುತ್ತಿರುವೆ. ಅವನು ಒಂದು ಟೆಲಿಕಮ್ಯುನಿಕೇಶನ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅವನಿಗೆ ನಲವತ್ತೈದು ವರ್ಷವಿರಬೇಕು. ಅವನ ಮೊದಲ ಹೆಂಡತಿ ವಿಜಯವಾಡದಲ್ಲಿ, ಎರಡನೆಯ ಹೆಂಡತಿ ನರಸರಾವಪೇಟಾದಲ್ಲಿದ್ದಾಳೆ ಎಂದು ಕೇಳಿದ್ದೆ. ನಾನು ಅವನಿಗೆ, 'ಇದೇನು ಕಥೆ? ಎಂದು ಕೇಳಿದಾಗ ಅವನು, ಎಲ್ಲಾ ಸುಳ್ಳು. ನನಗೆಲ್ಲಿದೆ ಹೇಳು ಆ ಅದೃಷ್ಟ? ಒಬ್ಬಳು ಹೆಂಡ್ತಿ ಜೊತೆಯಲ್ಲಿ ಏಗೋದೇ ಕಷ್ಟವಾಗ್ತಿದೆ. ನಿನಗೆ ಹೆಂಡ್ತಿ ಇಲ್ಲ, ಹೀಗಾಗಿ ನಿನಗೆ ಕಷ್ಟ ತಿಳಿಯಲ್ಲ' ಎಂದು ವಿಷಯಾಂತರಿಸಿದ.

ಅವನ ಮಾತು ನಿಜವೆನಿಸಿದರೂ ಅದು ನಿಜವೆಂದು ಅನ್ನಿಸುವುದಿಲ್ಲ. ಅವನನ್ನು ನಂಬಬೇಕೋ, ಬೇಡವೋ ತಿಳಿಯುವುದಿಲ್ಲ. ಆದರೆ ಅವರಿಬ್ಬರಿಂದ ತಪ್ಪಿಸಿಕೊಳ್ಳಲು ಪದೇ ಪದೇ ವಿಶಾಖಪಟ್ಟಣಮ್‌ನಿಂದ ಹುಬ್ಬಳ್ಳಿವರೆಗೆ ಡ್ಯೂಟಿ ಹಾಕಿಸಿಕೊಂಡು ಅಲೆಯುತ್ತಿರುತ್ತಾನೆ; ಮದುವೆಗೆ ಸಂಬಂಧ ಹುಡುಕಿ ಹೇಳುತ್ತಿರುತ್ತಾನೆ. ಮನೆಗಳನ್ನು ಫ್ಲಾಟ್‌ಗಳನ್ನೂ ಮಾರಾಟ ಮಾಡಿಸುತ್ತಿರುತ್ತಾನೆ.

'ಒಂದು ವಿಷಯ ಹೇಳು, ನೀನು ಈ ವಯಸ್ಸಿನಲ್ಲಿ ಮದುವೆಯಾದರೆ ನಿನ್ನ ಮಕ್ಕಳು ಅಡ್ಡಿ ಮಾಡಲ್ಲವಲ್ಲ?' ಸದಾನಂದ ಈ ಪ್ರಶ್ನೆಯನ್ನೂ ಕೇಳಿದ.

'ನಿರ್ಧಾರವಾದ ಮೇಲೆ ಹೇಳೋ ವಿಧಾನದಲ್ಲಿ ಹೇಳಿದರೆ ಅವರು ಬೇಡ ಅನ್ನಲ್ಲ' ಎಂದೆ.

ಒಂದು ವಾರದ ನಂತರ ಸರಸ್ವತಿಯ ಫೋನ್ ಬಂತು. ನನ್ನ ವಯಸ್ಸು ತಿಳಿದೂ ಅವಳು ಫೋನ್ ಮಾಡಿದಳು, ಸದಾನಂದ ಅವಳಿಗೆ ಅದೇನು ಹೇಳಿದ್ದನೋ...

'ನಿಮ್ಮ ಬಗ್ಗೆ ನಿಮ್ಮ ಸ್ನೇಹಿತರು ಒಳ್ಳೇ ಅಭಿಪ್ರಾಯ ಹೇಳಿದ್ದಾರೆ. ಅವರೊಂದಿಗೆ ನೀವೂ ವಾರಂಗಲ್‌ಗೆ ಬಂದಿದ್ದರೆ ತುಂಬಾ ಚೆನ್ನಾಗಿತ್ತು. ನೀವೂ ನನ್ನನ್ನು ನೋಡ ಬಹುದಿತ್ತು, ನಾನೂ ನಿಮ್ಮನ್ನು ನೋಡ್ತಿದ್ದೆ'. ಅವಳ ಮಾತಿನಿಂದ ಅವಳು ಎಲ್ಲರೊಂದಿಗೆ ಬೆರೆಯುವವಳು ಎಂದು ಅನ್ನಿಸಿತು.

'ನನಗೆ ಮಹಿಳೆಯರೊಂದಿಗೆ ಮಾತನಾಡಲು ಬರುವುದಿಲ್ಲ, ತಡವರಿಸುತ್ತೇನೆ. ಸಮಯ ನೋಡಿ ಖಂಡಿತ ಬರ್ತೀನಿ' ಎಂದಷ್ಟೇ ಅವಳಿಗೆ ಹೇಳಿದೆ.

'ವಯಸ್ಸಿನಲ್ಲಿ ಅಂತರವಿದ್ದರೂ ನನಗೆ ಅಡ್ಡಿಯಿಲ್ಲ. ಯಾಕೆಂದರೆ ನೀವು ನಿಮ್ಮ ಜವಾಬ್ದಾರಿಗಳನ್ನು ಪೂರೈಸಿದ್ದೀರಿ. ಆದರೆ ನನಗೆ ಇನ್ನೂ ಜವಾಬ್ದಾರಿಗಳಿವೆ.'

'ಅದೇನು ಹೇಳಿ'

'ನನಗೊಬ್ಬ ಮಗನಿದ್ದಾನೆ. ಫಸ್ಟ್ ಇಯರ್ ಡಿಗ್ರಿಯಲ್ಲಿ ಓದ್ತಿದ್ದಾನೆ. ಎಲ್ಲಾ ಸುಸೂತ್ರವಾಗಿ ನೆರವೇರಿದರೆ, ನಮ್ಮ ಮದುವೆಯಾದ ಮೇಲೆ ಅವನು ನಮ್ಮ ಜೊತೆಯಲ್ಲಿ ಇರಬಹುದ?'

'ಇರಬಹುದು'

'ನಮ್ಮ ಅಮ್ಮ ಸತ್ತು ಮೂರು ವರ್ಷಗಳಾಗಿವೆ. ನಮ್ಮಪ್ಪ ರೈಲ್ವೆಯಲ್ಲಿ ಕೆಲಸ ಮಾಡಿ ರಿಟೈರ್ ಆಗಿದ್ದಾರೆ. ಅವರಿಗೆ ಎಪ್ಪತ್ತು ವರ್ಷ. ಪೆನ್ಶನ್ ಬರುತ್ತೆ. ಅವರು ನನ್ನಣ್ಣನ ಮನೆಯಲ್ಲಿ ಇರಲು ಇಷ್ಟಪಡಲ್ಲ. ಅವರೂ ನಮ್ಮ ಜೊತೆ...' ಅವಳು ಅಷ್ಟಕ್ಕೇ ಮಾತು ನಿಲ್ಲಿಸಿದಳು.

'ಇರಬಹುದು. ಯಾಕೋ ಏನೋ ನನ್ನ ಧ್ವನಿ ನನಗೇ ಹೊಸದೆನಿಸಿತು'.

ಅವಳು ಮತ್ತೆ ಹೇಳಿದಳು, 'ನಾನಿಲ್ಲಿ ಒಂದು ಖಾಸಗಿ ಶಾಲೆಯಲ್ಲಿ ಸೈನ್ಸ್ ಅಸಿಸ್ಟೆಂಟ್ ಆಗಿ ಕೆಲಸ ಮಾಡ್ತಿದ್ದೇನೆ. ಮದುವೆಯಾದ ಮೇಲೆ ನಾನಿಲ್ಲಿರೋದು, ನೀವಲ್ಲಿರೋದು ಸರಿಯಾ?'

'ಸರಿಯಲ್ಲ'

'ಮೊದಲೇ ಎಲ್ಲವನ್ನೂ ಸ್ಪಷ್ಟಗೊಳಿಸಿಕೊಳ್ಳೋದು ಒಳ್ಳೇದು.